Mr. SPEAKER.—The calendar of events for the above election is as follows.—

(1) Last date and hour for receipt of nominations will be Monday the 4th April 1966, 2 P.M.

(2) Last date and hour for withdrawal of candidatures will be Monday the 4th April, 1966, 5 P.M.

(3) Date and hour of poll, if necessary, will be Tuesday the 5th April, 1966 between 2-00 P.M. and 5-00 P.M.

(4) The prescribed nomination forms can be had from the Notice Office.

Members' Representations.

ಶ್ರೀ ಕೆ. ಪಿ. ರೇವಣಸಿದ್ದಪ್ಪ (ತಿಪಟೂರು).—ನಾನು ಕಳುಹಿಸಿದಂತಹ ಕೆಲವು ಪ್ರಶ್ನೆಗಳಿಗೆ ಇದುವರೆಗೆ ಉತ್ತರ ಬರಲಿಲ್ಲ.....

Mr. SPEAKER.—The member may kindly come and meet me in my chamber.

Sri K. P. REVANA SIDDAPPA.—On other occasions I have met you several times.

Mr. SPEAKER.—For this purpose also the Member may kindly meet me.

ಶ್ರೀ ಸಿದ್ದಯ್ಯ ಕಾಶೀಮಠ್ (ಶಿರಹಟ್ಟಿ).—ಡೀಸಲ್ ಆಯಿರ್ ಬಗ್ಗೆ ನಾನು ಹಿಂದೆಯೇ ಹೇಳಿದ್ದೆ. ಧಾರವಾಡ, ಬಿಜಾಪುರ ಮತ್ತು ಬೆಳಗಾಂ ಪ್ರದೇಶಗಳಲ್ಲಿ ಅದನ್ನು ಒದಗಿಸಲಿಕ್ಕೆ ತುಂಬಾ ಕಷ್ಟವಿದೆ. ಅದು ಅಲ್ಲಿ ಸಿಗುತ್ತಾ ಇಲ್ಲ. ಅದರ ಜೊತೆಯಲ್ಲಿ ಈಗ ಸೀಮೆಯೆಣ್ಣೆ ಸಿಗುವುದೂ ಕೂಡ ಬಹಳ ಅಭಾವವಾಗಿರುವುದರಿಂದ ಮತ್ತು ಅದರ ಬೆಲೆಯೂ ಜಾಸ್ತಿಯಾಗಿರುವುದರಿಂದ ಅದರ ಬಗ್ಗೆ ತೀವ್ರಗತಿಯಿಂದ ವಿಚಾರ ಮಾಡಬೇಕು.

Mr. SPEAKER.—I think he has said that he will look into it.

ಶ್ರೀ ಸಿದ್ದಯ್ಯ ಕಾಶೀಮಠ್.—ನಮ್ಮಲ್ಲಿ ಸೀಮೆಯೆಣ್ಣೆ ಎಲ್ಲಿಯೂ ಸಿಗುತ್ತಾ ಇಲ್ಲ. ಬೆಲೆಯೂ ಈಗ ಡಬ್ಬರ್ ಆಗಿದೆ.

Mr. SPEAKER.—I think the Government will kindly look into it. I think something was mentioned by the Chief Minister. When certain matters are mentioned here it should not be that nobody seems to be attending to it. Whoever that is responsible must.....

Sri S. SIVAPPA (Shravanabelagola).—There is no response from that side.

Mr. SPEAKER.—Before I complete my sentence so many members ask.

Sri S. SIVAPPA.—I said that in spite of your observation there is no response.

Mr. SPEAKER.—There must be some method. In the first place it is wrong to have raised it without telling me. Regarding the matter raised, I am trying to impress on the Government that nothing has been done so far. Beyond that what can I do ?

Sri S. SIVAPPA.—I do not know whether they have understood anything.

Mr. SPEAKER.—Please continue the debate. Please try to be brief. The whole thing has to be over within 45 minutes. Members are sending in requisitions for participation in debate but I do not know whether they are serious or not. If they are serious they do not get ready when time is available.

Sri C. J. MUCKANNAPPA (Sira).—Sir, yesterday you requested the Government to make a statement regarding free water supply.

Mr. SPEAKER.—They will do it. I believe the Chief Minister is away. He is not here today. Therefore we must wait for Monday till he comes.

MYSORE SECONDARY EDUCATION EXAMINATION BOARD BILL 1966

(as reported by the Joint Select Committee)

Motion to consider—(Contd.).

†ಶ್ರೀ ಎಸ್. ಶಿವಪ್ಪ.—ಸಭಾಪತಿಯವರೇ, ಸೆಕೆಂಡರಿ ಎಜುಕೇಷನ್ ಎಗ್ಸಾಮಿನೇಷನ್ ಮಸೂದೆ ಸೆಲೆಕ್ಟ್ ಕಮಿಟಿಗೆ ಹೋಗುವುದಕ್ಕೆ ಮುಂಚೆ ಈ ಸಭೆಯಲ್ಲಿ ಚರ್ಚೆಯಾದಾಗ ಈ ಮಾನ್ಯ ಸಭೆ ಅನೇಕ ನಿರ್ದಿಷ್ಟವಾದ ಅಭಿಪ್ರಾಯಗಳನ್ನು ಸೂಚಿಸಿ ಸೆಲೆಕ್ಟ್ ಕಮಿಟಿಯವರು ಯಾವ ರೀತಿಯಲ್ಲಿ ಬದಲಾಯಿಸಬೇಕೆಂಬುದನ್ನು ಹೇಳಲಾಗಿತ್ತು. ನಾನು ಹೇಳಿದಂತಹ ಮುಖ್ಯವಾದ ಅಂಶ—ಎಗ್ಸಾಮಿನೇಷನ್ ಬೋರ್ಡಿಗೋಸ್ಕರ ಒಂದು ಸ್ಯಾಚುಟರಿ ಬೋರ್ಡನ್ನು ಮಾಡುವ ಕಾಲದಲ್ಲಿ ಅವರು ಏನು ಉದ್ದೇಶಕ್ಕೆ ಈ ಬೋರ್ಡನ್ನು ನಿರ್ಮಾಣಮಾಡಬೇಕೆಂದು ಮಾಡಿದ್ದರೋ ಆ ಒಂದು ಉದ್ದೇಶ ಈ ಮಸೂದೆ ಮುಖಾಂತರ ಖಂಡಿತವಾಗಿ ನೆರವೇರಲೆಂದು. ಅದು ಈ ಮಸೂದೆಯಲ್ಲಿ ಸ್ಪಷ್ಟವಾಗಿ ತಿಳಿಯುತ್ತದೆಯೇ ಎಂಬುದನ್ನು ವಿಚಾರ ಮಾಡಬೇಕು. ಇವತ್ತು ಒಂದು ಲಕ್ಷ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತುಕೊಳ್ಳುತ್ತಿದ್ದಾರೆ. ಇದಕ್ಕೆ ಸಂಬಂಧಪಟ್ಟ ಮಸೂದೆ ಇದುವರೆಗೂ ಈ ಸಭೆಯಲ್ಲಿ ಬಂದಿರಲಿಲ್ಲ. ಪರೀಕ್ಷೆಗಳ ವಿಷಯದಲ್ಲಿ ಈಗ ಏನು ಪರಿಸ್ಥಿತಿ ಉಂಟಾಗಿದೆಯೆಂದರೆ ಪ್ರಶ್ನಪತ್ರಿಕೆಗಳ ಮಾರಾಟ ಪೇಟೆಯಲ್ಲಿ ಆಗುತ್ತಿದೆ. ಪರೀಕ್ಷೆಗಳ ಗುಟ್ಟು ಹೊರಗೆಡಹುತ್ತಿದೆಂಬ ಸಂತೆಯವನ್ನು ಅನೇಕ ಸದಸ್ಯರು ಇಲ್ಲಿ ವ್ಯಕ್ತಪಡಿಸಿದ್ದಾರೆ. ಇಂತಹ ವಿಷಯಗಳನ್ನು ಬಹಳ ಎಚ್ಚರಿಕೆಯಿಂದ ವಿಚಾರ ಮಾಡುವ ಕಾಲದಲ್ಲಿ ಇವತ್ತು ಒಂದು ಬೋರ್ಡನ್ನು ನಿರ್ಮಾಣ ಮಾಡಿರುವ ರೀತಿನೀತಿ ನೋಡಿದರೆ ಇದರ ಮುಖ್ಯೋದ್ದೇಶ ಖಂಡಿತವಾಗಿ ಸಾಧನೆಯಾಗುವುದಿಲ್ಲವೆಂದು ನಾನು ಭಾವನೆ ಮಾಡಿದ್ದೇನೆ. ಯಾವ ಬೋರ್ಡ್ ರಚನೆಯಾವರೂ ಅದು ಕಾರ್ಯನಮಿತಿ ರೂಪದಲ್ಲಿರಬೇಕು. ಅವರು ಮಾಡಿರತಕ್ಕ ಬೋರ್ಡಿನಲ್ಲಿ 37 ಜನ ಸದಸ್ಯರು ಇರುವ ಹಾಗೆ ಮಾಡಿದರೆ ಏನು ಕೆಲಸ ಸಾಧನೆಯಾಗುತ್ತದೆ? ಅದು ಒಂದು ಸಮಿತಿ ರೂಪದಲ್ಲಿರುತ್ತದೆಯೇ! ನಿಜವಾಗಿ ಈ ಬೋರ್ಡನ್ನು ರಚನೆ ಮಾಡುವ ಕಾಲದಲ್ಲಿ ಇವರು ಯೋಚನೆ ಮಾಡಿದರೋ ಇಲ್ಲವೋ ಗೊತ್ತಿಲ್ಲ. ಈ ಸಭೆಯಲ್ಲಿ ಈ ಸಮಿತಿ ಬಹಳ ದೊಡ್ಡದು, ಇದನ್ನು ಕಡಮೆಮಾಡಿ ಎಂಬುದಾಗಿ ಹೇಳಿದ್ದೇವೆ. ಅದಕ್ಕೆ ಸೆಲೆಕ್ಟ್ ಕಮಿಟಿಯವರು ಹೆಚ್ಚಿಗೆ ಗಮನ ಕೊಡದೆ ಏನೂ ಮನಸ್ಸು ಮಾಡದೆ ಅದನ್ನು ಕಡಿಮೆ ಮಾಡದೆಯೇ ಪುನಃ ಇಲ್ಲಿಗೆ ಅದೇ ರೀತಿಯಲ್ಲಿ ಇದು ಬಂದಿರುವುದನ್ನು ನೋಡಿದರೆ ಈ ಸಮಿತಿಯ ಕಾರ್ಯ ಅಷ್ಟು ಯಶಸ್ವಿಯಾಗದು ಎಂಬುದಾಗಿ ನಾನು ಅಭಿಪ್ರಾಯಪಡುತ್ತೇನೆ. ಈಗ ಬಂದಿರುವ ಕಮಿಟಿ ವರದಿಯ ಪ್ರಕಾರವಾಗಿ 37 ಜನ ಸದಸ್ಯರೇ ಇದ್ದಾರೆ. ಲಕ್ಷ್ಮಣಸ್ವಾಮಿ ಮೊದಲಿಯಾರ್ ಅಂತಹವರ ಕಮಿಟಿಯಲ್ಲಿ ಕೇವಲ ೫ ಜನ ಸದಸ್ಯರು ಇರುವ ಹಾಗೆ ಒಂದು ಬೋರ್ಡನ್ನು ರಚನೆ ಮಾಡಿದರೆ ಸಾಕು ಎಂಬ ಅಭಿಪ್ರಾಯವನ್ನು ಕೊಟ್ಟಂಥ ತಜ್ಞರು ವಿಚಾರ ಪೂರ್ವಕವಾಗಿ ಈ ಬಗ್ಗೆ ಮಾಡಿರುವಂತಹ ನಿರ್ಣಯವನ್ನು ಇವರು ನಿರಾಕರಿಸಿದ್ದಾರೆ. ಈ ಬೋರ್ಡಿಗೆ ಪರೀಕ್ಷೆ ವಿಚಾರಗಳಲ್ಲಿ ಪಠ್ಯ ಪುಸ್ತಕಗಳನ್ನು ಏರ್ಪಾಡು ಮಾಡುವುದು, ವಿದ್ಯಾ ನೀತಿಯನ್ನು ಅಂದರೆ ಪಠ್ಯ ಕ್ರಮಗಳನ್ನು ಅಳವಡಿಸುವ ನೀತಿಯನ್ನೂ ಕೂಡ ಕೊಡಬೇಕಾಗಿತ್ತು. ಪರೀಕ್ಷೆಗಳಿಗೆ ಮತ್ತು ಪಠ್ಯ ಕ್ರಮಗಳ ಸಂಬಂಧವಾಗಿ ಹೇಳತಕ್ಕ ವಿಷಯಗಳನ್ನು ಅವರು ಕೈಬಿಟ್ಟಿದ್ದಾರೆ.